# 9

# ದೇವರು ಮರಿಯಳನ್ನು ಏಕೆ ಆರಿಸಿಕೊಂಡನು

## ಲೂಕ 1 ಮತ್ತು 2, ಒಂದು ನಿಕಟ ನೋಟ

"ಯೋಗ್ಯರಾದ ಸ್ತ್ರೀಯರು" ಎಂಬ ವಿಷಯದಲ್ಲಿ "ಮಕ್ಕಳು ಎದ್ದು ನಿಂತು ಆಕೆಯನ್ನು ಧನ್ಯಳು" ಎಂದು ಹೇಳುವರು (ಜ್ಞಾನೋಕ್ತಿ 31:28ಎ) KJVಯಲ್ಲಿ: "ಮಕ್ಕಳು ಮೇಲೆ ಎದ್ದು, ಆಕೆಯನ್ನು ಧನ್ಯಳು" ಎನ್ನುವರು.

ತಾಯಿಯರು ವಿಶೇಷವಾದವರು ಪೀನಟ್ ಕಾಮಿಕ್ ಸ್ಟ್ರಿಪ್ ಎಂಬದರಲ್ಲಿ ಚಾರ್ಲಿ ಬ್ರೌನ್‌ರವರು, "ಪ್ರತಿಯೊಬ್ಬರಿಗೂ, ಪ್ರೀತಿಸುವವರ, ಭರವಸೆ ಇಡುವವರ, ಚಿಂತನೆ, ಮಾಡುವವರ, ಸಹಾಯ ಮಾಡುವವರ, ಜೊತೆಯಲ್ಲಿ ಆನಂದಿಸಿ, ಆಳುವವರ ಅಗತ್ಯತೆ ಇದ್ದೇ ಇರುತ್ತದೆ." ಎಂದು ಹೇಳುವಾಗ, ಲೂಸಿ ಎಂಬಾಕೆಯು ಪ್ರತಿಕ್ರಯಿಸಿ, ಆ ರೀತಿಯ ಅನೇಕ "ಜನರು" ಇರುವರು ಅಂದಳು. ನಂತರ ಸ್ನೂಪಿ[1] ಎಂಬಾಕೆಯು, ಅಥವಾ "ಅದ್ಭುತ ವಾದ ಒಂದೇ ತಾಯಿ" ಅಂದಳು. ನನ್ನನ್ನು ನಂಬಿ, ನನಗೆ ಸಹಾಯ ವಾದವರಲ್ಲಿ ಇಬ್ಬರು ತಾಯಿಯರಿದ್ದಾರೆ, ಮೊದಲನೆಯದಾಗಿ ನಿನ್ನ ಸ್ವಂತ ತಾಯಿ ನಂತರ ನನ್ನ ಮೂರು ಹೆಣ್ಣು ಮಕ್ಕಳ ತಾಯಿ, ನಮ್ಮಲ್ಲಿ ಅನೇಕರು ಎದ್ದು ನನ್ನ ತಾಯಿ ಧನ್ಯಳು ಎಂದು ಹೇಳಬಹುದು.

ಲೂಕ 1 ರಲ್ಲಿ, ಯಾರದೋ ತಾಯಿಯನ್ನು ಧನ್ಯಳು ಎಂದು ಕರೆಯಲಾಗಿದೆ. ವಚನ 42ರಲ್ಲಿ ಆ ತಾಯಿಯನ್ನು ಕುರಿತು, ಎಲಿಜಬೇತಳು: "ಸ್ತ್ರೀಯರೊಳಗೆ ಆಶೀರ್ವಾದ ಹೊಂದಿದವಳು" ಎಂದಳು. ಈ ಇಬ್ರಿಯ ಹೇಳಿಕೆಯ ಅರ್ಥವೇನೆಂದರೆ, "ನೀನು ಧನ್ಯರಾ ದವರಲ್ಲಿ ಪ್ರಮುಖಳು" ಎಂಬ ಅರ್ಥ. ವಚನ 48ರಲ್ಲಿರುವ ಸ್ತ್ರೀಯು, "ಇಗೋ, ಇಂದಿನಿಂದ ತಲತಲಾಂತರದವರೆಲ್ಲಿ ನನ್ನನ್ನು ಧನ್ಯಳೆಂದು ಹೋಗಳುವರು" ಎಂದಳು. ತನ್ನ ಮಕ್ಕಳು ಮಾತ್ರವಲ್ಲದೆ, ಆಕೆಯು ದೇವರಿಂದ ಕರೆಯುವರು, ಈ ಅಧ್ಯಾಯವು ಯೇಸುವಿನ ತಾಯಿಯಾದ ಮರಿಯಳ ಕುರಿತು ಮಾತಾನಾಡುತ್ತಿದೆ.

ಎಲ್ಲಾ ತಾಯಿಯಂದಿರೂ ಆಶೀರ್ವಾದ ಹೊಂದಿದವರೇ, ಆದರೆ ಮರಿಯಳು ವಿಶೇಷ ಆಶೀರ್ವಾದ ಹೊಂದಿದ್ದಳು. ಆ ಕಾಲದಲ್ಲಿ ಬದುಕಿದ್ದ ಸಕಲ ಯೆಹೂದ್ಯ ಸ್ತ್ರೀಯರಲ್ಲಿ, ದೇವರು ತನ್ನ ಮಗನಿಗಾಗಿ ಮರಿಯಳನ್ನೇ ಆಯ್ಕೆ ಮಾಡಿಕೊಂಡನು. ಆದ್ದರಿಂದ, "ಏಕೆ? ಮರಿಯಳು ವಿಶೇಷವಾದವಳು?" ಎಂಬ ಪ್ರಶ್ನೆ ಉಂಟಾಗುತ್ತದೆ.

ಆಕೆಯ ಆಯ್ಕೆಯಲ್ಲಿ ದೇವರಿಗೆ ಯಾವುದೇ ಒತ್ತಡವಿರಲಿಲ್ಲ. ಅವಳು ಪವಿತ್ರ ಮತ್ತು ಪರಿಪೂರ್ಣವಾಗಿದ್ದರಿಂದ, ದೇವರು ಆಕೆಯನ್ನು ಆಯ್ಕೆ ಮಾಡಿದನು ಎಂಬ ಯಾವುದೇ ಸೂಚನೆಗಳಿರುವದಿಲ್ಲ. ಆದರೆ ದೇವರು ತನ್ನ ಕೃಪೆಯ ಮೇರೆಗೆ ಆರಿಸಿಕೊಂಡನು. ದೇವದೂತನು ಆಕೆಯನ್ನು "ದೇವರ ಅನುಗ್ರಹ ಹೊಂದಿದವಳೇ" ಎಂದನು (ಲೂಕ 1:28). ಗ್ರೀಕ್ ಭಾಷೆಯ "ಕೃಪೆ" - ಎಂಬ ಪದವು *"ಅನುಗ್ರಹ"* ಎಂದಿರುತ್ತದೆ. "ಯೋಗ್ಯತೆ ಇಲ್ಲದವರಿಗೆ ದೊರಕುವ ಕುರುಣೆ" ಅದಾಗ್ಯೂ ದೇವರು ಆಕೆಯಲ್ಲಿ ಮೆಚ್ಚಬಹುದಾದ ಕೆಲವು ಕಾರ್ಯಗಳು ಇದ್ದವು. ಆಕೆಯಲ್ಲಿದ್ದ ಮೆಚ್ಚುವಂಥ ಗುಣಗಳು ಯಾವವು? ಈ ಕುರಿತು ಅಧ್ಯಯನವನ್ನು ಮಾಡೋಣ.

ಲೂಕ 1:26ರಲ್ಲಿ, "ಆರನೆಯ ತಿಂಗಳು ..." ಅಂದರೆ ಸ್ನಾನಿಕನಾದ ಯೋಹಾನನ ತಾಯಿಯಾದ ಎಲಿಜಬೇತಳು ಗರ್ಭಧರಿಸಿ ಆರು ತಿಂಗಳಾದ ನಂತರ, "ಆರನೆಯ ತಿಂಗಳಲ್ಲಿ, ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತಿಯ ಊರಿಗೆ

ಒಬ್ಬ ಕನ್ಯೆಯ ಬಳಿಗೆ ಕಳುಹಿಸಿದನು.'' ನಜರೇತೆಂಬ ಹಳ್ಳಿಯ ಗಲಿಲಾಯ ಸಮುದ್ರದಿಂದ ಹದಿನೈದು ಮೈಲು, ಹಾಗೂ ಮೆಡಿಟರೇನಿಯನ್ನಿಗೆ ಇಪ್ಪತ್ತ ಎರಡು ಮೈಲುಗಳ ಅಂತರದಲ್ಲಿ ಲೆಬನೋವಿನ ತಗ್ಗಿನಲ್ಲಿತ್ತು.

ಆಕೆಯು, ''ದಾವೀದನ ಮನೆತನದ ಯೋಸೇಫನೆಂಬ ಪುರುಷನಿಗೆ ನಿಶ್ಚಿತಾರ್ಥವಾಗಿದ್ದಳು'' (1:27ಎ). ಯೋಸೇಫನು ದಾವೀದನ ರಾಜಮನೆತನದವನಾಗಿದ್ದರೂ, ಅವನು ಒಬ್ಬ ಬಡ[2] ಬಡಗಿಯಾಗಿದ್ದನು (ಮತ್ತಾಯ 13:55). ಅವನು ನಜರೇತಿನ ವಾಸಿಯಾಗಿದ್ದನು (ಲೂಕ 2:4).

ದೇವದೂತರು ಪ್ರತ್ಯಕ್ಷವಾಗಿ ಕಾಣಿಸಿಕೊಂಡ ಆ ಸ್ತ್ರೀ ಮರಿಯಳು (1:27ಬಿ). ಗ್ರೀಕ್, ಮೂಲದ ''ಮರಿಯಳು'' ಎಂದರೆ ಇಬ್ರಿಯ ಭಾಷೆಯಲ್ಲಿ ''ಮರಿಯಾಮ್''[3] ಎಂಬ ಅರ್ಥ. ಯೋಸೇಫನಂತೆ, ಮರಿಯಳು ಸಹ ದಾವೀದನ ವಂಶದವಳು.[4] ಸಹಜವಾಗಿ ಆಕೆಯು ನಿಡಾಂಬರದ ಕುಟುಂಬದವಳಾಗಿದ್ದಳು.[5] ಮರಿಯಳು - ಯೋಸೇಫನಿಗೆ - ನಿಶ್ಚಿತಾರ್ಥವಾಗಿದ್ದಳು (ಮತ್ತಾಯ 1:18). ಆ ದಿನಗಳಲ್ಲಿ ಚಿಕ್ಕ ಹುಡಿಗಿಯರಿಗೆ ನಿಶ್ಚಿತಾರ್ಥ ಮಾಡುತ್ತಿದ್ದರು. ಆದ್ದರಿಂದ ಗಬ್ರಿಯೇಲ್ ದೇವ ದೂತನು ಮರಿಯಳಿಗೆ ಪ್ರತ್ಯಕ್ಷವಾದಾಗ, ಆಕೆ ಬಾಲ್ಯಾವಸ್ಥೆಯಲ್ಲಿದ್ದಳು.[6]

ದೇವರ ಚಿತ್ತವು ಸಮಯ ಹಾಗೂ ಪರಿಸ್ಥಿತಿಗಳನ್ನು ಅವಲಂಭಿಸಿರುವದಿಲ್ಲ, ಅದು ಪ್ರಮುಖವೂ ಅಲ್ಲ. ದೇವರು, ಯಾವುದೇ ಸ್ಥಳದಲ್ಲಿ ನೆಲೆಸಿರುವ, ಯಾರನ್ನಾದರೂ ಆಯ್ಕೆ ಮಾಡಿಕೊಳ್ಳಬಹುದು. ದೇವರಿಂದ ಉಪಯೋಗಿಸಲ್ಪಡಲು ನೀವುಗಳು ವೃದ್ಧರಾಗಿರಬೇಕು ಎಂಬ ನಿಯಮವಿಲ್ಲ. ದೇವ ಯೋಜನೆಯನ್ನು ನೆರವೇರಿಸಲು ಸಲುವಾಗಿ ದೇವದೂತರು ಒಬ್ಬ ಬಾಲಕಿಗೆ ಪ್ರತ್ಯಕ್ಷನಾದನು.

## ಆಕೆಯು ತನ್ನ ವಿವೇಕವನ್ನು ಉಪಯೋಗಿಸಲು ಹಿಂಜರಿಯಲಿಲ್ಲ

ದೇವದೂತನು ಮರಿಯಳಗೆ, ''ದೇವರ ದಯೆ ಹೊಂದಿದವಳೇ'' ಎಂದು ವಂದಿಸಿದನು (1:28). ಆಕೆಯು ಆ ಮಾತಿಗೆ ತತ್ತರಿಸಿ (1:29ಎ)ದಳು. ದೇವದೂತರ ದರ್ಶನವಾದ ನಂತರದಲ್ಲಿ, ಸತ್ಯವೇದದ ಅನೇಕರ ಭಯ ಭ್ರಾಂತರಾಗಿದ್ದರು. ಆದರೆ ಮರಿಯಳು ಗಾಬರಿಗೊಳ್ಳದೆ, ''ಇದೆಂಥಾ ಆಶೀರ್ವಾದ'' ಎಂದಳು (1:29ಬಿ).

ಮರಿಯಳು ತನ್ನ ವಿವೇಚನೆಯನ್ನು ಉಪಯೋಗಿಸಿದಳು. ನಂತರದಲ್ಲಿ ಆಕೆಯು ''ಆ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸುತ್ತಿದ್ದಳು'' (2:19) ಎಂದು ಗಮನಿಸುತ್ತೇವೆ. ದೇವರು ಆಕೆಗೆ ನೀಡಿದ ವಿವೇಕವನ್ನು ಉಪಯೋಗಿಸಲು ಆಕೆ ಹಿಂಜರಿಯಲಿಲ್ಲ.

## ಆಕೆ ದೈವಭಕ್ತೆಯಾಗಿದ್ದಳು

ದೇವ ದೂತನು ಆಕೆಗೆ ''ಭಯಪಡಬೇಡ'' ಎಂದನು, ಯಾಕೆಂದರೆ ಮರಿಯಳೇ ನಿನಗೆ ''ದೇವರ ದಯೆ ದೊರಕಿತು'' (1:30). ಉತ್ತಮರು ಮಾತ್ರ ದೇವರ ದಯೆಗೆ ಪಾತ್ರರು ಮರಿಯಳು ಯೋಗ್ಯಳು, ಯಥಾರ್ಥಳೂ, ನೈತಿಕ ಗುಣಮಟ್ಟ ಹೊಂದಿದ್ದಳು ಎಂದು ತಿಳಿಯುತ್ತೇವೆ. ಆಕೆ ಶಿಸ್ತಿನವಳಾಗಿದ್ದಳು.

## ಆಕೆಯು ದೇವರನ್ನು ಹಾಗೂ ಆತನ ಛಲವನ್ನು ನಂಬಿದ್ದಳು

ದೇವದೂತನು ಮುಂದುವರೆದು:

> ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು

ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು (1:31-33).

ಸಭೆಯು, ಯೇಸುವಿನ ರಾಜ್ಯವಾಗಿದೆ (ಮತ್ತಾಯ 16:18, 19). ನಮ್ಮ ಕರ್ತನ ದಾವೀದನ ಯೇಸು ಪರಲೋಕಕ್ಕೆ ಏರಿ ಹೋಗಿ, ದೇವರ ಬಲಪಾರ್ಶ್ವದಲ್ಲಿ ದಾವೀದನ ಸಿಂಹಾಸನದಲ್ಲಿ ಕೂತುಕೊಂಡು ತನ್ನ ರಾಜ್ಯವನ್ನು ಆಳಿದನು (ಅಪೊಸ್ತಲರ ಕೃತ್ಯಗಳು 2:25-36). ದೇವದೂತನ ಮಾತುಗಳಲ್ಲಿ ಈ ವಿಚಾರಗಳು ಒಳಗೊಂಡಿದ್ದವು.

ತನ್ನ ಮುಂದಿನಮೂವತ್ತು ಅಥವಾ ಅದಕ್ಕಿಂತ ಹೆಚ್ಚಾದ ವರ್ಷಗಳಲ್ಲಿ ಏನು ಸಂಭವಿಸಬಹುದು ಎಂದು ಮರಿಯಳು ಆಲೋಚಿಸದೆ ಆಕೆಯ ಕಿವಿಗಳಲ್ಲಿದ್ದ "ನೀನು ಗರ್ಭವತಿಯಾಗಿ ಒಂದು ಗಂಡು ಮಗುವನ್ನು ಹೆರುವಿ" ಎಂಬ ವಿಚಾರದಲ್ಲಿ, ದೂತನಿಗೆ, "ಇದು ಹೇಗಾದೀತು ನಾನು ಪುರುಷನನ್ನು ಅರಿತವಳಲ್ಲ?" ಎಂದಳು (1:34).

ಇದು ಸಹ ಜಕರೀಯನ ಅಪನಂಬಿಕೆಯಿಂದ, ಒಂಭತ್ತು ತಿಂಗಳ ಕಾಲ ಅವನು ಮೂಕನಾಗಿದ್ದ ಪರಿಸ್ಥಿತಿಯನ್ನು ನೆನಪು ಮಾಡುತ್ತದೆ (1:18, 20) - ಅದು *ಹೇಗೆ* ಎಂಬ ಪ್ರಶ್ನೆಯು ಮರಿಯಳದ್ದಾಗಿತ್ತು. ಹಾಗೂ ಆಕೆ ದೂತನನ್ನು *ನಂಬಿದಳು.* ಎಂದು ಒತ್ತಿ ಹೇಳ ಲಾಗಿದೆ (1:45).

ಆಕೆಯ ಪ್ರಶ್ನೆಗೆ, "ಹೇಗೆ" ದೂತನು ಪ್ರತಿಕ್ರಯಿಸಿ, "ನಿನ್ನ ಮೇಲೆ ಪವಿತ್ರಾತ್ಮ ಬರುವದು ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವದು ಅದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು" ಅಂದನು (1:35). ಇಲ್ಲಿ "ಶಕ್ತಿಯ ನೆರಳು" ಎಂಬ ಸ್ಟೆಜೂಯಂಟಿನ ಗ್ರೀಕ್ ಪದವನ್ನು ಬಳಸಲಾಗಿದೆ.[7] ಅಂದರೆ "ದೇವದರ್ಶನದ ಗುಡಾರವನ್ನು ಆವರಿಸಿದ ದೇವರ ಸಾನ್ನಿಧ್ಯ" (ನೋಡಿರಿ ವಿಮೋಚನಕಾಂಡ 40:35).[8]

ಮರಿಯಳು ಯಾವುದೇ ಸಂಕೇತವನ್ನು ಬಯಸಲಿಲ್ಲ ಅದಾಗ್ಯೂ ದೇವದೂತನು ಒಂದು ಗುರುತನ್ನು ನೀಡಿದನು: ಮತ್ತು ನಿನ್ನ ಬಂಧುವಾದ[9] ಎಲಿಸಬೇತಳಿದ್ದಾಳಲ್ಲಾ, ಆಕೆ ಸಹ ಮುಪ್ಪಿನವಳಾದರೂ ಗರ್ಭಿಣಿಯಾಗಿದ್ದಾಳೆ; ಆಕೆಯ ಗರ್ಭದಲ್ಲಿ ಗಂಡುಮಗುವಿದೆ; ಬಂಜೆಯನಿಸಿಕೊಂಡಿದ್ದ ಆಕೆಗೆ ಇದೇ ಆರೆಯ ತಿಂಗಳು (1:36). ಅವನು, "ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ ಅಂದನು" (1:37).[10] ಇದನ್ನೇ ಮರಿಯಳು ನಂಬ ಬೇಕಾಯಿತು. ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾ ಗುವದಿಲ್ಲ (1:45). ಜೀವಿತದ ಸವಾಲುಗಳನ್ನು ಸ್ವೀಕರಿಸಲು ಈ ವಿಧವಾದ ನಂಬಿಕೆಯು ನಮ್ಮಲ್ಲಿರಬೇಕು.

## ಆಕೆಯು ದೀನ ಮನಸ್ಸನ್ನು ಹೊಂದಿದ್ದಳು

ಮರಿಯಳು ಉತ್ತರಿಸಿ "ನಾನು ಕರ್ತನ ದಾಸಿ, ನಿನ್ನ ಮಾತಿನಂತೆ ನನಗಾಗಲಿ ಅಂದಳು" (1:38ಎ). ಈ ಕಾರಣದಿಂದಲೇ, ದೇವರು ಮರಿಯಳನ್ನು ಆಯ್ಕೆ ಮಾಡಿದನು. "ಕರ್ತನ ದಾಸಿ" ಎಂಬ ಮೊದಲನೆಯ ಮಾತು, "ದಾಸತ್ವಕ್ಕೆ ಒಳಪಟ್ಟು" ಎಂಬ ಗ್ರೀಕ್ ಅರ್ಥ "ದಾಸಿಯಾದ ಹೆಂಗಸು" ಅವರು ಇನ್ನು ಕೀಳು ಮಟ್ಟದಲ್ಲಿ ಕಾಣಲ್ಪಟ್ಟವರು, ಅವರನ್ನು ಬಹಳ ಹೀನವಾಗಿ ಕಾಣುತ್ತಿದ್ದರು. ನಂತರದಲ್ಲಿ ಮರಿಯಳು "ಆತನು ತನ್ನ ದಾಸಿಯ ದೀನ ಸ್ಥಿತಿಯ ಮೇಲೆ ಲಕ್ಷ್ಯವಿಟ್ಟಿದ್ದಾನೆ" ಅಂದಳು (1:48).

## ಆಕೆಯು ದೇವರ ಚಿತ್ತಕ್ಕೆ ಅಧೀನಳಾಗಿದ್ದಳು

ವಚನ 1:38ರ ಎರಡನೆಯ ಹೇಳಿಕೆಯನ್ನು ಗಮನಿಸಿ: "ನಿನ್ನ ಮಾತಿನಂತೆ ನನಗಾಗಲಿ ಅಂದಳು." ಇದರ ಸಂಪೂರ್ಣವಾದ ಪರಿಣಾಗಳನ್ನು ಗಮನಿಸಿರಿ. (ಮರಿಯಳು ವಿವೇಕಿ ಯಾಗಿದ್ದಳು. ಇದು ನೆನಪಿರಲಿ, ಆಕೆಯ ಕಣ್ಣುಗಳನ್ನು ತೆರೆದವಳಾಗಿ ಮುಂದಾದಳು.) ಆಕೆಯು ಪ್ರಾಯದವಳು, ನಿಶ್ಚಿತಾರ್ಥವಾದವಳು, ಇದ್ದಕ್ಕಿದ್ದ ಹಾಗೆ ಗರ್ಭವತಿಯಾಗಿದ್ದಳು. ಖಂಡಿತವಾಗಿಯು ಆ ಗರ್ಭವು ತನ್ನದಲ್ಲ ಎಂದು ಆಕೆಯು ಗಂಡನು ಹೇಳುವವನಿದ್ದನು!

ನಜರೇತೆಂಬ ಆ ಚಿಕ್ಕ ಹಳ್ಳಿಯಲ್ಲಿ, ಮರಿಯಳು ಎಂಥಾ ಅವಮಾನಕ್ಕೆ ಗುರಿಯಾದಳು ಎಂದು ಆಲೋಚಿಸಿರಿ. ಜನರ ಗಮನ, ಟೀಕೆ, ಪಿಸುಗುಟ್ಟುವಿಕೆ, ಇಲ್ಲ ಸಲ್ಲದ ಮಾತುಗಳ ಕುರಿತು ಊಹಿಸಿರಿ.[11] ಒಂದು ವೇಳೆ ಆಕೆ ತನ್ನ ಜೀವವನ್ನು ಹತ್ಯೆಮಾಡಿಕೊಳ್ಳಬಹುದಿತ್ತು. ಯಾಕೆಂದರೆ ಧರ್ಮಶಾಸ್ತ್ರದ ಪ್ರಕಾರ ಮದುವೆಯಾಗದೆ ಗರ್ಭ ಧರಿಸಿದವಳನ್ನು ಕಲ್ಲೆಸೆದು ಕೊಲ್ಲಬೇಕಿತ್ತು (ಧರ್ಮೋಪದೇಶಕಾಂಡ 22:23, 24[12]). ಧರ್ಮಶಾಸ್ತ್ರದಲ್ಲಿ ಬರೆಯಲಾದ ಸಕಲ ಪಾಪಗಳಿಗಿಂತ, ವ್ಯಭಿಚಾರದದಿಂದ ಗರ್ಭದ ಸ್ತ್ರೀಯ ಜೀವಿತ ಬಹಳ ಕಠಿಣವಾ ಗಿತ್ತು. ಅದರ ಬಗ್ಗೆ ಎರಡು ಅಥವಾ ಮೂರು ಸಾಕ್ಷಿಗಳು ಸಹಜವಾಗಿ ದೊರಕುತ್ತಿದ್ದರು (ಧರ್ಮೋಪದೇಶಕಾಂಡ 17:6; 19:15). ಆಕೆಯ ಅನೇಕ ಅಥವಾ ಏಳನೇ ತಿಂಗಳಿನ ಗರ್ಭದ ಸಮಯದಲ್ಲಿ, ಆಕೆಯ ಮನೆಯ ಮುಂದೆ ಓಡಾಡುತ್ತಿದ್ದ ಎರಡು ಅಥವಾ ಮೂರು ಸಾಕ್ಷಿಗಳೇ ಸಾಕಾಗಿದ್ದವು.

ಈ ಪರಿಣಾಮಗಳ ಕುರಿತು ಮರಿಯಳು ವಿವೇಕಿಯಾಗಿದ್ದರೂ, "ನಿನ್ನ ಮಾತಿನಂತೆ ಆಗಲಿ" ಎಂದಳು. ದೇವರು ನಡೆಸುವ ಮಾರ್ಗವೇ ಸರಿಯಾದದ್ದು ಅಂದಳು. ಆಕೆ ದೇವರ ಚಿತ್ತಕ್ಕೆ ಒಳಪಟ್ಟಳು - ತಾಯಿಯಾಗಿರಲೇ ತಂದೆಯಾಗಿರಲೀ, ಸಹೋದರ ಅಥವಾ ಸಹೋದರಿಯಾಗಿರಲೀ, ದೇವರು ಇಂಥಹ ಮನೋಭಾವದವರನ್ನೇ ಉಪಯೋಗಿಸಿ ಕೊಳ್ಳುವನು.

ಆ ಮೇಲೆ "ಆ ದೂತನು ಆಕೆಯ ಬಳಿಯಿಂದ ಹೊರಟು ಹೋದ ಮೇಲೆ" (1:38ಬಿ). "ಮರಿಯಳು ಅವಸರದಿಂದ ಎದ್ದು ಮಲೆನಾಡಿಗೆ ಹೋರಟಳು" (1:39). ಅಲ್ಲಿ ತನ್ನ ಸಂಬಂಧಿಯಾದ ಎಲಿಜಬೇತಳನ್ನು ಸಂಧಿಸಿದಳು. ಅವಳಿಗೆ ಆದ ಸಂಗತಿಗಳನ್ನು ನಂಬಿದ್ದ ಎರಡು ಜನರಲ್ಲಿ ಎಲಿಜಬೇತಳು ಸಹ ಒಬ್ಬಳಾಗಿದ್ದಳು.

ಎಲಿಜಬೇತಳು ಮರಿಯಳನ್ನು ಕಂಡ ತಕ್ಷಣ, "ಪವಿತ್ರಾತ್ಮ ಭರಿತಳಾದಳು" (1:41ಎ). "ನೀನು ಸ್ತ್ರೀಯರೊಳಗೆ ಆಶೀರ್ವಾದ ಹೊಂದಿದವಳು ಮತ್ತು ನಿನ್ನಲ್ಲಿ ಹುಟ್ಟುವ ಕೂಸು ಆಶೀ ರ್ವಾದ ಹೊಂದಿದ್ದು" (1:42ಎ): "ನನ್ನ ಸ್ವಾಮಿಯ ತಾಯಿಯು ನನ್ನ ಬಳಿಗೆ ಬರುವಷ್ಟು ಭಾಗ್ಯ ನನಗೆ ಎಲ್ಲಿಂದಾಯಿತು?" (1:42ಬಿ, 43).

## ಆಕೆ ಗ್ರಂಥಗಳನ್ನು ಅರಿತಿದ್ದಳು

ವಚನ 46ರಲ್ಲಿ ಮರಿಯಳು ವಿಶೇಷವಾದ ಸ್ತುತಿ ಪದವನ್ನು ಹಾಡಿ, ವಚನ 55ರವರೆಗೆ ಮುಂದುವರೆಸಿದಳು. ಅರ್ನೆಸ್ಟ್ ಹೌಸರ್‌ರವರು, ಇದನ್ನ ಹೊಸ ಒಡಂಬಡಿಕೆಯ[13] "ಒಂದು ವಿಶೇಷ ಪದ್ಯದ ಮುತ್ತು" ಎಂದು ವರ್ಣಿಸಿರುವರು. ಯೇಸುವಿನ ತಾಯಿಯ ಬಾಯಿಂದ ಹೊರಟ ದೊಖಲೆಗಳು ಇವುಗಳಾಗಿವೆ.

ಮರಿಯಳ ಈ ಗೀತ, 1 ಸಮುವೇಲ 2:1-10ರ ಹನ್ನಳ ಗೀತದ ನೆನಪನ್ನು ಮಾಡುತ್ತದೆ. ಮರಿಯಳ ಈ ಗೀತೆಯಲ್ಲಿ ಮೂರು ಪ್ರಮುಖ ಅಂಶಗಳಿವೆ: (1) ದೇವರು ಆಕೆಯಲ್ಲಿ ಮಾಡಿ ಕೃತ್ಯಗಳು (1:46-49), (2) ಹಾಗೂ ಜನರಿಗಾಗಿ ಮಾಡಿದ ಕೃತ್ಯಗಳು - ಅಸಹಾಯಕರಿಗೆ ಸಹಾಯ, ದೀನರು ಹಾಗೂ ಹಸಿದವರಿಗೆ ಸಹಾಯ (1:50-53), ಮತ್ತು (3) ದೇವರು ಇಸ್ರಾಯೇಲ್ಯರಿಗೆ ಮಾಡಿದ ಕೃತ್ಯ (1:54, 55). ದೇವರು ತನ್ನ ವಾಗ್ದಾನಗಳನ್ನು ನೆರವೇರಿ

ಸುವನು ಎಂಬುದಕ್ಕೆ ಇದು ಸಾಕ್ಷಿಯಾಗಿದೆ!

ಮೋಲಿಯ ಈ ಮಾತುಗಳಿಂದ, ಆಕೆಯು ಗ್ರಂಥಗಳನ್ನು ಅರಿತಿದ್ದಳು ಎಂದು ತಿಳಿಯುತ್ತೇವೆ.[14] ಆಕೆಯ ಗೀತೆಯಲ್ಲಿ ಹಳೇ ಒಡಂಬಡಿಕೆಯ ಹನ್ನೆರಡು ಪುಸ್ತಕಗಳಿಂದ ಆಯ್ದು ಭಾಗಗಳಿವೆ. ಬಾಲಕರು ಮಾತ್ರ ಮಂದಿರಕ್ಕೆ ಹೋಗುವ ಪವೃತ್ತಿಯಕಾಲದಲ್ಲಿ, ಮರಿಯಳ ಈ ಜ್ಞಾನ ಅತಿ ವಿಶೇಷವಾದದ್ದು.

ಮರಿಯಳ ಈ ನಿದರ್ಶನದಿಂದ ನಾವುಗಳು ಎಚ್ಚೆತ್ತುಕೊಳ್ಳಬೇಕು. ಲೂಕ 2ರಲ್ಲಿ ಯೇಸುವಿನ ಜನನ ಹಾಗೂ ಕುರುಬರ ಆಗಮನದ ಕುರಿತು ಗಮನಿಸುತ್ತೇವೆ. ವಚನ 19ರಲ್ಲಿ, "ಮರಿಯಳು ಆ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡಳು" ಎಂದು ನೋಡುತ್ತೇವೆ.

## ಆಕೆ ಅಂಜದೆ, ಹಾಗೂ ಧೈರ್ಯವುಳ್ಳವಳಾಗಿದ್ದಳು

ಯೇಸುವಿನ ಜನನವಾಗಿ ನಾಲ್ವತ್ತು ದಿವಸಗಳ ನಂತರ ಯಜ್ಞ ಸಮರ್ಪಿಸುವದಕ್ಕಾಗಿ ಮರಿಯಳು ಮತ್ತು ಯೋಸೇಫ ಯೇಸುವನ್ನು ಯೇರೂಸಲೇಮಿನ ದೇವಾಲಯಕ್ಕೆ ಕರೆದುಕೊಂಡು ಹೋದರು (ಯಾಜಕಕಾಂಡ 12:2-4, 6-8). ಅಲ್ಲಿ ಸೀಮೆಯೋನನೆಂಬವನು ಯೇಸುವನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು, ಆ ಮಗುವಿನ ಸಾಮರ್ಥ್ಯದ ಕುರಿತು ಮಾತಾಡಿದನು (ಲೂಕ 2:25-35). ಆ ಮಾತುಗಳಲ್ಲಿ ಎಚ್ಚರಿಕೆಯು ಅಡಕವಾಗಿತ್ತು: "ಇದಲ್ಲದೆ ನಿನ್ನ ಪ್ರಾಣಕ್ಕಂತೂ ಅಲಗು ನಾಟಿದಂತಾಗುವದು ..." (2:35).

ಮರಿಯಳ ಮುಂದಿದ್ದ ಕಾರ್ಯದ ಬಗ್ಗೆ ಒಂದು ಕ್ಷಣ ಯೋಚಿಸಿ. ನನಗೂ ಮತ್ತು ನನ್ನ ಹೆಂಡತಿಗೂ ಇರುವ ಮೂರು ಹೆಣ್ಣು ಮಕ್ಕಳನ್ನು ಸಾಕುವದು ಕಷ್ಟಕರವಾಗಿತ್ತು. ಮರಿಯಳು *ಏಳು* ಜನ ಮಕ್ಕಳನ್ನು ಹೊಂದಿದ್ದಳು[15] - ಅವರಲ್ಲಿ ದೇವರ ಮಗನಾದವನೇ ಹಿರಿಯವನಾಗಿದ್ದನು! ಆ ಮಗನನ್ನು ಪೋಷಿಸುವದು ಒಂದು ದೊಡ್ಡ ಜವಾಬ್ದಾರಿಯಲ್ಲವೇ? ಅದರ ಸಂಗಡ "ನಿನ್ನ ಆತ್ಮವು ಅಲಗು ನೆಟ್ಟಂತಾಗುವದು" ಎಂದು ಸೀಮೆಯೋನನು ನುಡಿದಿದ್ದನು!

ಧೈರ್ಯವುಳ್ಳ ಸ್ತ್ರೀ ಮಾತ್ರ ಇದನ್ನು ಎದುರಿಸಲು ಸಾಧ್ಯವಿತ್ತು. ಯಾವುದೇ ಪರಿಣಾಮಗಳನ್ನು ಎದುರಿಸಲು ಮರಿಯಳು ಸಾಮರ್ಥ್ಯ ಹೊಂದಿದ್ದಳು. ಕರ್ತನ ತಾಯಿಯಾಗಿ ಅವಳು ಎಲ್ಲಕ್ಕೂ ಸಿದ್ಧವಾಗಿದ್ದಳು.

ಅತಿ ಚಿಕ್ಕದಾದ ಹಳ್ಳಿಯಿಂದ ಅತಿ ಬಡವಳಾದ ಈಕೆಯನ್ನು ದೇವರು ಏಕೆ ಆಯ್ಕೆ ಮಾಡಿದನು ಎಂಬ ಸತ್ಯಾಂಶವನ್ನು ಅರಿಯಲು ಸಾಧ್ಯವಿದೆ. ದೇವರು ಯಾವುದೇ ರಾಜಮನೆತನದ ಐಶ್ವರ್ಯವಂತರನ್ನು ಆಯ್ಕೆ ಮಾಡಲಿಲ್ಲ. ಧೈರ್ಯ ಹಾಗೂ ಬಲವುಳ್ಳವರ ಅಗತ್ಯತೆ ದೇವರಿಗಿತ್ತು. ಅಮೇರಿಕೆಯ ಹೇಳಿಕೆಯಂತೆ, "ಒರಟಾಗಿರುವವರು ದೇವರಿಗೆ ಅಗತ್ಯವಿದೆ."[16]

ಯೇಸುವಿನ ವ್ಯಕಿಗತವಾದ ಸೇವಾ ಅವಧಿಯಲ್ಲಿ, ಯೋಸೇಫನ ಕುರಿತು ಯಾವದೇ ಮಾಹಿತಿಗಳಿರುವದಿಲ್ಲ. ಕೇವಲ ಮರಿಯಳು ಮತ್ತು ಆಕೆಯು ಇತರೆ ಮಕ್ಕಳ ಕುರಿತು ಮಾತ್ರ ನೋಡುತ್ತೇವೆ.[17] ಯೇಸೇಫನು ವೃದ್ಧನಾಗಿದ್ದು, ಯೇಸುವಿನ ಸೇವೆ ಆರಂಭವಾಗುವ ಮೊದಲೇ ಮರಣ ಹೊಂದಿದನ ಎಂಬ ಹೇಳಿಕೆಯಿದೆ. ಆದ್ದರಿಂದ ಮರಿಯಳು ತನ್ನ ಏಳು ಮಕ್ಕಳನ್ನು ಸಾಕುವ ಸಲುವಾಗಿ ಬಹಳ ಕಷ್ಟ ಪಟ್ಟಿರಬಹುದು.[18] ಇದು ಬಹಳ ಸರಳ ಸಂಗತಿಯಲ್ಲಿ "ದೇವರಿಗೆ ಧೈರ್ಯವುಳ್ಳವರ ಅಗತ್ಯತೆಯಿತ್ತು" ಎಂದು ನಾನು ಪುನಃ ಹೇಳುತ್ತೇನೆ!

## ಜವಾಬ್ದಾರಿಯನ್ನು ಹೊರಲು ಆಕೆ ಸಿದ್ಧವಿದ್ದಳು

ಅನೇಕರಲ್ಲಿ ಇಲ್ಲದ, ಮತ್ತೊಂದು ಧೈರ್ಯವುಳ್ಳ ಅಂಶವನ್ನು ಮರಿಯಳಲ್ಲಿ ಗಮನಿಸುತ್ತೇವೆ: "ಆಕೆ ಜವಾಬ್ದಾರಿಯನ್ನು ಹೊರಲು ಸಿದ್ಧಳಿದ್ದಳು" ಯೇಸು ಹನ್ನೆರಡು ವರ್ಷದವನಾದಾಗ

ಉಂಟಾದ ಸಂದರ್ಭವನ್ನು ನಿದರ್ಶನವಾಗಿ ನೋಡಬಹುದು (ಲೂಕ 2:41-51). ಯೇಸು ಕಳೆದು ಹೋಗಿರುವಾಗ ಯೋಸೇಫ ಮತ್ತು ಮರಿಯಳು ಆತನಿಗಾಗಿ ಯೇರುಸಲೇಮಿನಲ್ಲೆಲ್ಲಾ ಹುಡುಕಾಡಿದರು. ಈ ದಿನಗಳಲ್ಲಿ ಅನೇಕರು ಇಂಥಹ ಜವಾಬ್ದಾರಿಯನ್ನು ಹೊರುವದಿಲ್ಲ, ತಮ್ಮ ವೈಯಕ್ತಿಕ ಜೀವಿತವನ್ನು, ಮದುವೆಯನ್ನು ಹಾಗೂ ಕುಟುಂಬಗಳನ್ನು ಅಲಕ್ಷ್ಯ ಮಾಡುವವ ರಾಗಿದ್ದಾರೆ.

## ಆಕೆ ತನ್ನ ಮಗನಲ್ಲಿ ದೃಢವಿಶ್ವಾಸವಿಟ್ಟಿದ್ದಳು

18 ವರ್ಷಗಳ ನಂತರ ಯೇಸು ತನ್ನ ಸಾರ್ವಜನಿಕ ಸೇವೆಯನ್ನು ಆರಂಭಿಸಿದನು. ಆತನ ಆರಂಭದ ಸೇವೆಯಲ್ಲಿ ಮರಿಯಳು ಹಾಗೂ ಆಕೆಯ ಮಗನು ಕಾನಾದ ಮದುವೆಗೆ ಹೋಗಿದ್ದರು. ಅಲ್ಲಿ ದ್ರಾಕ್ಷಾರಸ ತೀರಿದಾಗ, ಮರಿಯಳು ಯೇಸುವಿಗೆ "ದ್ರಾಕ್ಷಾರಸ ತೀರಿರುತ್ತದೆ ಅಂದಳು" (ಯೋಹಾನ 2:3).[19] ನಂತರ ಆಕೆ ಸೇವಕರಿಗೆ, ಆತನು ನಿಮಗೆ ಏನು ಹೇಳು ತ್ತಾನೋ ಅದನ್ನು ಮಾಡಿರಿ ಅಂದಳು (ಯೋಹಾನ 2:5). ಆ ಪರಿಸ್ಥಿತಿಯನ್ನು ತನ್ನ ಮಗನು ಸುಧಾರಿಸುವನು ಎಂದು ಆಕೆ ನಂಬಿದ್ದಳು.

ತಂದೆ ತಾಯಿಗಳಲ್ಲಿ ಇರಬೇಕಿದ್ದ ಸದ್ಗುಣವನ್ನು ಮರಿಯಳು ಪ್ರದರ್ಶಿಸಿದಳು. ತಮ್ಮ ಮಗನಲ್ಲದ ಭರವಸವನ್ನು ಪ್ರದರ್ಶಿಸಿದಳು. "ನೀನು ಮೊದಲು ಸಾಧ್ಯ" ಎಂಬ ಧೈರ್ಯದ ಮಾತನ್ನು ನನ್ನ ತಾಯಿ ಯಾವಾಗಲೂ ನನಗೆ ಹೇಳುತ್ತಿದ್ದರು.

## ಇತರ ಚಿಂತನೆಯನ್ನು ಆಕೆ ಮಾಡುತ್ತಿದ್ದಳು

ಮುಂದಿನ ಮೂರು ವರ್ಷಗಳ ಕಾಲದಲ್ಲಿ ತನ್ನ ಮಗನು ಸ್ವತಃ ಸರಿಯಾದ ಪೋಷಣೆ ಯನ್ನು ಹೊಂದುತ್ತಿರುವದಿಲ್ಲ ಎಂದು ಚಿಂತಿಸಿದಳು (ಮಾರ್ಕ 3:20, 21). ಆಕೆ ಮತ್ತು ಆಕೆಯ ಇತರೆ ಮಕ್ಕಳು, ಆತನನ್ನು ಮನೆಗೆ ಕರೆಯಲು ಬಂದಿದ್ದರು (ಮಾರ್ಕ 3:31-35).[20] ಅವರು ಯೇಸು ಈ ಲೋಕಕ್ಕೆ ಬಂದಂಥ ಉದ್ದೇಶವನ್ನು ಅರಿತವರಾಗಿರಲಿಲ್ಲ. ಅದಾಗ್ಯೂ ಮರಿಯಳು ಮಗನ ಬಗ್ಗೆ ಚಿಂತಿಸಿದಳು. ಚಿಂತಿಸುವ ತಾಯಿ ನಿನಗಿರುವದಾದರೆ, ಆಕೆಗಾಗಿ ದೇವರಿಗೆ ಸ್ತುತಿ ಮಾಡು.

## ಆಕೆ ಅಂತ್ಯದವರೆಗೂ ತನ್ನ ಕಾರ್ಯದಲ್ಲಿ ನಂಬಿಗಸ್ತಳಾಗಿದ್ದಳು

ಶಿಲುಬೆಯ ಮರಣದ ಸಮಯದವರೆಗೂ, ಮರಿಯಳ ಬಗ್ಗೆ ಹೆಚ್ಚು ಗಮನ ನೀಡಲಾಗಿರುವದಿಲ್ಲ, ಈ ಚಿತ್ರಣದ ಕುರಿತು ಯೋಹಾನನು ಬರೆದಿರುವನು.

> ಯೇಸುವಿನ ಶಿಲುಬೆಯ ಬಳಿಯಲ್ಲಿ ಆತನ ತಾಯಿಯೂ ಆತನ ತಾಯಿಯ ತಂಗಿಯೂ ಕ್ಲೋಪನ ಹೆಂಡತಿಯಾದ ಮರಿಯಳೂ ಮಗ್ದಲದ ಮರಿಯಳೂ ನಿಂತಿದ್ದ ತನ್ನ ಪ್ರೀತಿಯ ಶಿಷ್ಯನನ್ನೂ ನೋಡಿ ತಾಯಿಗೆ - ಅಮ್ಮಾ, ಇಗೋ ನಿನ್ನ ಮಗನು ಎಂದು ಹೇಳಿದನು. ತರುವಾಯ ಆ ಶಿಷ್ಯನಿಗೆ - ಇಗೋ ನಿನ್ನ ತಾಯಿ ಎಂದು ಹೇಳಿದನು. ಆ ಹೊತ್ತಿನಿಂದ ಆ ಶಿಷ್ಯನು ಆಕೆಯನ್ನು ತನ್ನ ಮನೆಯಲ್ಲೇ ಇರಿಸಿಕೊಂಡನು (ಯೋಹಾನ 19:25-27).

ಕ್ರೂಜೆಯ ಮೇಲಿದ್ದ ಯೇಸುವನ್ನು ನೋಡುತ್ತಿದ್ದ ಮರಿಯಳನ್ನು ನೆನಪಿಸಿಕೊಳ್ಳಿರಿ ಆಕೆ ಕೆನ್ನೆಯ ಕಣ್ಣೀರು ಹರಿಯುತ್ತಿರಲಿಲ್ಲವೇ? ಆತನು ಮಗುವಾಗಿರುವಾಗ ಆರೈಕೆ ಮಾಡಿದ ಕೈಗಳ ನೆನಪಾಗುವದಿಲ್ಲವೇ? ಅನೇಕ ದಿವಸಗಳ ಹಿಂದೆ ನಾನು ಬಾಯಿ ಪಾಠಮಾಡಿದ ಕಂಠಪಾಠವನ್ನು ಗಮನಿಸೋಣ:

ಇಬ್ಬರು ಸ್ತ್ರೀಯರು
ಇಳಿಜಾರಿನಲ್ಲಿ ಬರುವಾಗ
ಅವರ ಅಳುವನ್ನು ಆಲಿಸಿದೆನು;
ಒಬ್ಬಳು ಮನುಷ್ಯನು ತನ್ನ ಕೆಟ್ಟ ಕಾರ್ಯಕ್ಕಾಗಿ,
ಪ್ರತಿಫಲ ಹೊಂದುವರು.
ಎನ್ನಲು ಮತ್ತೊಬ್ಬಳು, "ನನ್ನ ಮಗನೇ,
ನನ್ನ ಮಗನೇ ನನ್ನ ಮಗನೇ ಅಂದಳು."[21]

ಅನೇಕ ವರ್ಷಗಳ ಹಿಂದೆ ತಾನು ಕೇಳಿದ್ದ ಸಂಗತಿಯನ್ನು ಮರಿಯಳು ಗೊಲ್ಗಥ ಗುಡ್ಡದ ಬಳಿಯಲ್ಲಿ ಅರ್ಥ ಮಾಡಿಕೊಂಡಳು: "ನಿನ್ನ ಆತ್ಮಕ್ಕೆ ಅಲಗು ನೆಟ್ಟಂತಾಗುವದು" ಎಂಬ ಮಾತು ಅದಾಗಿದೆ (ಲೂಕ 2:35ಎ). ಹೌದು ದೇವರಿಗೆ ಧೈರ್ಯವುಳ್ಳವರ ಅಗತ್ಯವಿದೆ.

ಕಡೇಯ ಒಂದು ಚಿತ್ರಣವೇನೆಂದರೆ: ಮರಣ, ಹೂಣಿಡುವಿಕೆ, ಪುನರುತ್ಥಾನದ ನಂತರ, ಪವಿತ್ರಾತ್ಮನ ಬರುವಿಕೆಗಾಗಿಯೂ, ಹಾಗೂ ಸಭಾ ಅಥವಾ ದೇವರಾಜ್ಯದ ಸ್ಥಾಪನೆ ಕಾರ್ಯಕ್ಕಾಗಿ ಅವರು ಯೆರೂಸಲೇಮಿನಲ್ಲಿ ಕಾದುಕೊಂಡರು. ಶಿಷ್ಯರ ಸಂಗಡ ಮರಿಯಳು ಹಾಗೂ ಯೇಸುವಿನ ಸಹೋದರರನು ಇದ್ದರು ಎಂದು ಲೂಕನು ದಾಖಲಿಸಿರುವನು (ಅಪೊಸ್ತಲರ ಕೃತ್ಯಗಳು 1:14). ಆತನ ಸಹೋದರರು ಸಹ ನಂಬಿದ್ದರು; ಮರಿಯಳ ನಂಬಿಕೆಯು ಅರಳಿತ್ತು.

ಇಲ್ಲಿಗೆ ಮರಿಯಳ ಚರಿತ್ರೆ ಮುಕ್ತಾಯವಾಗುತ್ತದೆ. ಪ್ರೇರಿತವಲ್ಲದ ಹೇಳಿಕೆಯ ಪ್ರಕಾರ ಮರಿಯಳು ಯೆರೂಸಲೇಮಿನಲ್ಲಿ ಮರಣ ಹೊಂದಿದಳು. ಇನ್ನೊಂದು ಹೇಳಿಕೆಯ ಪ್ರಕಾರ, ಅವಳು ಯೋಹಾನನೊಂದಿಗೆ, ಎಫೆಸಕ್ಕೆ ತೆರಳಿ ಅಲ್ಲಿ ಮರಣ ಹೊಂದಿರಬಹುದು. ಆಕೆ ಏನಾದಳು ಎಂಬುದು ಸ್ಪಷ್ಟವಿರುವದಿಲ್ಲ. ಆದರೆ ಆದಿ ಸಭೆಯ ಸ್ಥಾಪನೆಯಲ್ಲಿ ಆಕೆ ಇದ್ದಳು. ಈ ವಿಚಾರದೊಂದಿಗೆ ಮರಿಯಳ ಚರಿತ್ರೆ ಸಮಾಪ್ತಿಯಾಗುತ್ತದೆ.

## ಮುಕ್ತಾಯ

ಮರಿಯಳನ್ನು ದೇವರು ಏಕೆ ಆಯ್ಕೆಮಾಡಿದನು? ದೇವರು ಆಕೆಗೆ ನೀಡಿದ್ದ ಅಸಾಧ್ಯ ಎನ್ನಬಹುದಾದ ಜವಾಬ್ದಾರಿಯನ್ನು ಹೊರುವ ವಿಶೇಷ ಗುಣಗಳನ್ನು ಆಕೆ ಹೊಂದಿದ್ದಳು:

- ಆಕೆ ತನ್ನ ವಿವೇಕವನ್ನು ಉಪಯೋಗಿಸಲು ಹಿಂಜರಿಯಲಿಲ್ಲ.
- ಆಕೆ ದೈವ ಭಕ್ತೆಯಾಗಿದ್ದಳು.
- ಆಕೆ ದೇವರನ್ನು - ಆತನ ಶಕ್ತಿಯನ್ನು ನಂಬಿದ್ದಳು.
- ದೀನ ಸ್ವಭಾವವನ್ನು ಹೊಂದಿದ್ದಳು.
- ದೇವರ ಚಿತ್ತಕ್ಕೆ ಅಧೀನಳಾಗಿದ್ದಳು.
- ಗ್ರಂಥಗಳನ್ನು ಅರಿತಿದ್ದಳು.
- ಧೈರ್ಯಶಾಲಿಯಾಗಿದ್ದಳು.
- ಜವಾಬ್ದಾರಿ ಹೊರಲು ಸಿದ್ಧಳಾಗಿದ್ದಳು.
- ತನ್ನ ಮಗನಲ್ಲಿ ಭರವಸ ಇಟ್ಟಿದ್ದಳು.
- ಇತರರ ಬಗ್ಗೆ ಚಿಂತನೆ ಹೊಂದಿದ್ದಳು.
- ಅಂತ್ಯದವರೆಗೆ ತನ್ನ ಕೆಲಸದಲ್ಲಿ ನಂಬಿಗಸ್ತಳಾಗಿದ್ದಳು.

ಜೀವಿತದ ಜವಾಬ್ದಾರಿಗಳನ್ನು ಈಡೇರಿಸಲು ಈ ಮೇಲಿನ ಸಂಗತಿಗಳು ಯಾರಿಗಾದರೂ ಸಹಕಾರಿಯಾಗಿರುತ್ತವೆ, ಇದರಿಂದ ಅವರು ದೇವರ ಸೇವೆಗೆ ಅರ್ಹರಾಗುತ್ತಾರೆ.

ಅಂತ್ಯಮಾಡುವಾಗ, ಮರಿಯಳಲ್ಲದ ಸದ್ಗುಣಗಳ ಬಗ್ಗೆ ನಾನು ನಿಮಗೆ ನೆನಪು ಮಾಡುತ್ತೇನೆ. ಆಕೆ ದೇವದೂತರಿಗೆ ನೀಡಿದ ಉತ್ತರವನ್ನು ಗಮನಿಸಿ: "ನಿನ್ನ ಮಾತಿನಂತೆ ಆಗಲಿ" (ಲೂಕ 1:38ಬಿ). ಮರಿಯಳ ಪ್ರತಿಕ್ರಿಯೆಯ ಬಗ್ಗೆ ಕೆನ್‌ಗೆರ್‌ರವರ ಈ ಕೆಳಕಂಡ ಹೇಳಿಕೆಯನ್ನು ನೀಡಿರುವರು.

> ... ಆಕೆಯ ಕ್ಷಣಾರ್ಧದಲ್ಲಿ ನಿರ್ಧಾರ ಮಾಡಿ, ಪೂರ್ಣ ವಿಧೇಯಳಾದಳು. ಆಕೆ ದೇವರಿಗೆ ಸಮರ್ಪಿಸಿಕೊಂಡಳು. ಮುಂದೆ ಆಗಬಹುದಾದ ಪ್ರಶ್ನೆಗಳ ಪರಿಣಾಮಗಳಿದ್ದವು. ಅಥವಾ ಅನೇಕರು ಕಣ್ಣುಚ್ಚಿಸಿ ನೋಡಬಹುದು. ಅದಕ್ಕೆ ಉಂಟಾಗುವ ಕರ್ಚೆನ್ನಾಗಿದ್ದರೂ ಅಥವಾ ಪರಿಮಾಣಗಳು. ಅಗೌರವ ಅಥವಾ ಗಂಡನು ಆಕೆಯನ್ನು ಬಿಟ್ಟು ಬಿಡಬಹುದಾದ ಪರಿಸ್ಥಿತಿ ಉಂಟಾಗ ಬಹುದಾಗಿದ್ದರೂ,
>
> ಮತ್ತು ಆಕೆಯ ಪ್ರಾಣವಾಗಿದ್ದರು
>
> ... ಆಕೆ ದೇವರಿಗೆ ಅಧೀನಳಾದಳು (ಯೇಸುವನ್ನು) ಬೆಳಸುವ ಸಲುವಾಗಿ ಎಲ್ಲವನ್ನು ಹೊರತು ಪಡಿಸಿಕೊಂಡಳು ...[22]

*ನಿನ್ನ* ಪ್ರಭುವಿಗೆ[23] ವಿಧೇಯನಾಗಲು ಸಿದ್ಧನಿರುವೆಯಾ? ಏನೇ ಸಂಕಷ್ಟ ಬರುವದಾದರೂ, ನೀನು ಸಿದ್ಧನಾಗಿದ್ದರೆ, ನೀನು ದೇವರ ಕಾರ್ಯಕ್ಕೆ ದೇವರೇ ಮೆಚ್ಚಿರುವ ವ್ಯಕ್ತಿಯಾಗಿರುವಿ.

---

ಟಿಪ್ಪಣಿಗಳು

[1]Snoopy ಎಂಬುದು ಚಾರ್ಲಿಬ್ರೌನನ್ನ ನಾಯಿಯಾದಿದೆ. ಹಲವು ಸಾರಿ ಕಾರ್ಟೂನಿನ ಪ್ರಾಣಿಗಳು ಭಾವನೆಗಳನ್ನು ಪದದಗಳಲ್ಲಿ ತಿಳಿಸುತ್ತವೆ. [2]ಯೋಸೇಪ, ಮರಿಯಳು ಅರ್ಪಿಸಿದ ಬಲಿಯಿಂದ ಅವರು ಬಡವರಾಗಿದ್ದರು ಎಂದು ತಿಳಿಯುತ್ತದೆ (ಲೂಕ 2:24ನ್ನು ಯಾಜಕಕಾಂಡ 12:6-8ರೊಂದಿಗೆ ಹೋಲಿಸಿ ನೋಡಿ). "ಅವರಿಗೆ ಬೆಲೆಯುಳ್ಳ ಬಲಿಯನ್ನು ಅರ್ಪಿಸಲು ಸಾಧ್ಯವಾಗಿದ್ದರೆ ಮಗುವಿನ ಮಹತ್ವವನ್ನು ನೋಡಿ ಕಡಿಮೆಯ ಬಲಿಯನ್ನು ಅರ್ಪಿಸಲು ಇಷ್ಟಪಡಲಾರರು" ಎಂದು J. W. McGarvey ಬರೆದದ್ದು ಸರಿಯಾಗಿದೆ. ನಮ್ರತೆಯ ಪ್ರಾರಂಭವನ್ನು ಸೂಚಿಸುತ್ತದೆ [3]"ಮರಿಯಾಮಳು" ಅಂದರೆ "ಕಹಿ." ರೂತಳು 1:20 ಈ ಪದದ ರೂಪವನ್ನು ಉಪಯೋಗಿಸಿದೆ. ಹಳೇ ಒಡಂಬಡಿಕೆಯಲ್ಲಿ ಒಬ್ಬಳೇ "ಮರಿಯಾಮಳು" (ಮೋಶೆಯಳ ಸಹೋದರಿ) ಆದರೆ ಹೊಸ ಒಡಂಬಡಿಕೆಯಲ್ಲಿ "ಮರಿಯಳ" ಹೆಸರು ಹೊಂದಿದವರು ಅನೇಕರಿದ್ದಾರೆ. [4]ಕ್ರಿಸ್ತನು ದಾವೀದ ವಂಶದವನು (1:32, 69). ಮೆಸ್ಸೀಯನು ದಾವೀದನಿಂದಲೇ ಹುಟ್ಟುವನು ಎಂದು ಮುಂತಿಳಿಸಲಾಗಿತ್ತು (2 ಸಮುವೇಲ 7:12). "[ದಾವೀದನ] ಗರ್ಭದಿಂದ ಮೆಸ್ಸಿಯನು ಬರುವನು" ಎಂದು ಅಕ್ಷರಾರ್ಥವಾಗಿ ದೇವರು ತಿಳಿಸಿದ್ದಾನೆ (KJVಯನ್ನು ನೋಡಿ). NIVಯಲ್ಲಿ, "ನಿನ್ನ ಶರೀರದಿಂದ ಬರುವನು." ಯೇಸು ಶರೀರಿಕ ಸಂಬಂಧವಿಲ್ಲದೇ ದಾವೀದನ ಸಂತತಿಯಿಂದ ಯೋಸೇಫನ ಮುಖಾಂತರ ಬಂದನು, ಆದರೆ ಮರಿಯಳ ಮುಖಾಂತರ ಶರೀರಿಕ ಸಂತತಿಯಾಗಿ ದೇವರ ವಾಗ್ದಾನದಂತೆ ಮರಿಯಳಿಂದ ಹುಟ್ಟಿದನು. [5]ಈ ಪಾಠದಲ್ಲಿ 2ನೇ ಸೂಚನೆಯನ್ನು ನೋಡಿರಿ. [6]ಯೌವನ ಸ್ತ್ರೀಯರು ಮುಂಚಿನ ಯೌವನ ಪ್ರಾಯದಲ್ಲಿ ಇದ್ದರು. ಯೋಸೇಫನ ವೃದ್ಧನಿರಬಹುದು. ಯೇಸುವಿನ ವೈಯಕ್ತಿಕ ಸೇವೆಯ ಕಾಲದಲ್ಲಿ ಯೋಸೇಫನ ಹೆಸರು ಎಲ್ಲಿಯೂ ಪ್ರಸ್ತಾಪಿಸದೇ ಇದ್ದದರಿಂದ ಯೇಸು ಮೂವತ್ತು ವರ್ಷದವನಾಗುವಷ್ಟರಲ್ಲಿ ಯೋಸೇಫನು ಮೃತನಾಗಿರಬಹುದು. [7]"ಸೆಪ್ಟಜೂಯಂಟ್" ಅಂದರೆ ಹಳೇ ಒಡಂಬಡಿಕೆಯ ಅನುವಾದ ಪ್ರತಿ. ಸೆಪ್ಟಜೂಯಂಟ್ ಬಗ್ಗೆ ಹೆಚ್ಚಾದ ವಿವರಕ್ಕೆ "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು ನೋಡಿ. [8]ಗ್ರೀಕ್ ಪುರಾಣದೊಂದಿಗೆ ಯೇಸುವಿನ ಕನ್ಯಾ ಜನನವನ್ನು ಹೋಲಿಸಲಾಗಿದೆ, ಅವರ ದೇವತೆಗಳನ್ನು ಕ್ರಿಸ್ತನೊಂದಿಗೆ ಹೋಲಿಸಲಾಗದು. [9]Cousin ಎಂದು KJV ಯಲ್ಲಿ ಭಾಷಾಂತರಿಸಿದ್ದು ಸರಿಯಾದರು ಅವರ ಸಂಬಂಧವು ಎಷ್ಟು ಹತ್ತಿರವಾಗಿದೆ ಎಂಬುದು ತೋರಿಸುವುದಿಲ್ಲ, ಮರಿಯಳು ಹಾಗೂ ಎಲಿಜಬೇತಳು ಸಂಬಂಧಿ (cousin)ಗಳಾಗಿದ್ದರು, ಈ ಸಂಬಂಧವನ್ನು ನಾವು "second cousins" or "third cousins" or "fourth cousins, once removed." [10]"ದೇವರ ಪ್ರತಿ ಮಾತು ಅಸಾಧ್ಯವಾಗಿರುವದಿಲ್ಲ" ಎಂದು ಗ್ರೀಕ್‌ನ ಅಕ್ಷರಾರ್ಥವಾಗಿದೆ. ASVನಲ್ಲಿ "ದೇವರಿಂದ ಬಂದ ಯಾವ ಮಾತು ಶಕ್ತಿಹೀನದಲ್ಲ" ಎಂದಿದೆ.

[11]ಯೋಹಾನ 8:41, "ವ್ಯಭಿಚಾರದಿಂದ ಹುಟ್ಟಿದವರಲ್ಲ-ಆದರೆ ನೀವೇ." [12]ಯಾಜಕಕಾಂಡ 20:10; ಯೆಹೆಜ್ಕೇಲ 16:38; ಯೋಹಾನ 8:5 ಇದನ್ನು ಸಹ ನೋಡಿರಿ. [13]Ernest O. Hauser, "Mary, Mother of Christ," *Reader's Digest* (December 1971): 170. [14]ಎಲಿಜಬೇತಳ ಹಾಗೆ (1:41) ಮರಿಯಳು ಸಹ "ಆತ್ಮ ಭರಿತಳಾಗಿದ್ದಳು" ಎಂಬುದನ್ನು ನಾನು ಗಡೆಗಣಿಸಲಿಲ್ಲ ಮತ್ತು ಜಕರ್ಯನಂತೆ (1:67). ಏನೇ ಇದ್ದರೂ ಮರಿಯಳ ಮಾತು ಗಳು ಆಕೆಗೆ ವಾಕ್ಯದ ತಿಳುವಳಿಕೆ ಇದ್ದೆಂತು ಸೂಚಿಸುತ್ತವೆ ಎಂಬುದನ್ನು ನಾನು ನಂಬುತ್ತೇನೆ. [15]ಮರಿಯಳು ಇತರೆ ನಾಲ್ಕು ಗಂಡುಮಕ್ಕಳನ್ನು ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದಿದ್ದಳು (ಮಾರ್ಕ 6:3). ಹೆಣ್ಣು ಮಕ್ಕಳಿರುವಷ್ಟು ಗಂಡು ಮಕ್ಕಳಿದಿದ್ದರೆ ಆಕೆ ಒಟ್ಟು ಹತ್ತು ಮಕ್ಕಳನ್ನು ಪಡೆದಿದ್ದಳು. [16]ಬಲದ ಮತ್ತು ನಿಶಬ್ಧತೆಯ ಬಗ್ಗೆ ನೀವು ವಾಸಿಸುವ ಪ್ರಾಂತದಲ್ಲಿರುವ ಭಾಷಾ ಪ್ರಯೋಗವನ್ನು ಬಳಸಿ. [17]ಯೋಹಾನನಿಗೆ ತನ್ನ ತಾಯಿಯ ಜವಾಬ್ದಾರಿಯನ್ನು ನೀಡಿದನು (ಯೋಹಾನ 19:26, 27) ಎಂಬ ವಾಸ್ತವವು ಯೋಸೇಫನು ಜೀವಂತವಿಲ್ಲವೆಂದು ಸೂಚಿಸುತ್ತದೆ. [18]ತನ್ನ ತಂದೆಯಾದ ಯೋಸೇಫನ ಮೃತನಾದ ನಂತರ, ಯೇಸು ಕುಟುಂಬದ ಜವಾ ಬ್ದಾರಿಯನ್ನು ಹೊಂದಿರಬಹುದು. [19]ಮರಿಯಳಲ್ಲಿ ಹಾಗೂ ಯೋಸೇಫನಲ್ಲಿ ಉಂಟಾದ ಬದಲಾವಣೆಯ ಬಗ್ಗೆ ಈ ಪುಸ್ತಕದಲ್ಲಿ ನಂತರ ಚರ್ಚಿಸಲಾಗಿದೆ. [20]ವಚನ 20 ಹಾಗೂ 31ರ ಸಂಬಂಧವನ್ನು ಖಚಿತವಾಗಿ ಹೇಳಲಾಗದು ಆದರೆ ಬಲವಾದ ಸಾಧ್ಯತೆ ಇದೆ.

[21]ಅರಿಯದ ಬರಹಗಾರ. [22]Ken Gire, *Moments with the Savior* (Grand Rapids, Mich.: Zondervan Publishing House, 1998), 26-27. [23]ಈ ಪ್ರಸಂಗವನ್ನು ಉಪಯೋಗಿಸುವಾಗ, ನಿಮ್ಮ ಓದುಗರಿಗೆ ರಕ್ಷಣೆಯನ್ನುಪಡೆಯಲು ಏನು ಮಾಡಬೇಕೆಂಬುದನ್ನು ನೀವು ತಿಳಿಸಬಯಸಬೇಕು: ಅವರು ಕ್ರೈಸ್ತರಾಗದಿದ್ದರೆ ಮಾನಸಾಂತರಪಟ್ಟು, ಒಪ್ಪಿಕೊಂಡು, ದೀಕ್ಷಾಸ್ನಾನ ಹೊಂದಿ (ಅಪೊಸ್ತಲರ ಕೃತ್ಯಗಳು 2:37, 38; 8:35-39; 22:16). ಅವರ ವಿಶ್ವಾಸವನ್ನು ತೋರಿಸಬೇಕು ಅವರು ನಂಬಿಕೆಯಿಲ್ಲದ ಕ್ರೈಸ್ತರಾದರೆ ಮನಸಾಂತರಹೊಂದಿ, ತಪ್ಪುಗಳನ್ನು ಒಪ್ಪಿಕೊಂಡು ಮತ್ತು ಪ್ರಾರ್ಥನೆ ಮಾಡಿ ಕರ್ತನ ಹತ್ತಿರ ಮತ್ತು ಸಭೆಯ ಹತ್ತಿರ ಬರತಕ್ಕದ್ದು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9; ಯಾಕೋಬ 5:16).